33

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 249
ಸದಸ್ಯರ ಹೆಸರು : ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ
(ಮಾನ್ಯ ವಿಧಾನ ಪರಿಷತ್ ಸದಸ್ಯರು)
ಉತ್ತರಿಸಬೇಕಾದ ದಿನಾಂಕ : 11.07.2018
ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಕ್ಕರೆ ಹಾಗೂ ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಕ್ರಸ	ಪ್ರಶ್ನೆ	ಉತ್ತರ
ಅ)	ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಿಂದ ರಾಜ್ಯದ ಎಲ್ಲಾ ನಿಗಮಗಳಲ್ಲಿನ ಅನುಕಂಪ ಆಧಾರಿತ ನೇಮಕಾತಿಗಳನ್ನು ತಡೆ ಹಿಡಿಯುವಂತೆ ಯಾವ ಯಾವ ದಿನಾಂಕಗಳಲ್ಲಿ ಸುತ್ತೋಲೆ ಹೊರಡಿಸಲಾಗಿದೆ: (ವಿವರವಾದ ಮಾಹಿತಿ ನೀಡುವುದು)	ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಡಿ ಬರುವ ಸಾರ್ವಜನಿಕ ಉದ್ದಿಮೆಗಳು ನಷ್ಟದಲ್ಲಿದ್ದು ಸ್ವಯಂ ನಿವೃತ್ತಿ ಯೋಜನೆಯು ಆಚರಣೆಯಲ್ಲಿ ಇದ್ದರೂ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದ ಕಾರಣ ಸುತ್ತೋಲೆ ಸಂಖ್ಯೆ: ಸಿಐ 63 ಸಿಎಂಐ 2000, ದಿನಾಂಕ: 10-10-2000 ರಲ್ಲಿ ದಿನಾಂಕ: 10-10-2000 ರಿಂದ ಮುಂದಕ್ಕೆ ಎಲ್ಲಾ ಕಂಪನಿಗಳು, ನಿಗಮಗಳು ಹಾಗೂ ಮಂಡಳಿಗಳು ಮುಂದೆ ಸರ್ಕಾರದ ಆದೇಶ ಹೊರಡಿಸುವವರೆಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಬಾರದೆಂದು ಸೂಚಿಸಲಾಗಿದೆ.
ಆ)	ಈ ರೀತಿ ಸುತ್ತೋಲೆ ಹೊರಡಿಸಲು ಕಾರಣಗಳೇನು:	ಸಾರ್ವಜನಿಕ ಉದ್ದಿಮೆಗಳು ನಷ್ಟದಲ್ಲಿದ್ದು ನಷ್ಟವನ್ನು ಕಡಿಮೆ ಮಾಡುವ ಭಾಗವಾಗಿ ಸ್ವಯಂ ನಿವೃತ್ತಿ ಯೋಜನೆಯು ಆಚರಣೆಯಲ್ಲಿ ಇದ್ದರೂ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಿ ವೇತನ ವೆಚ್ಚ ಹೆಚ್ಚಿಸಿಕೊಳ್ಳುವುದನ್ನು ಕಡಿಮೆ ಮಾಡಲು ದಿನಾಂಕ: 10-10-2000ರ ಸುತ್ತೋಲೆ ಹೊರಡಿಸಲಾಗಿದೆ.
ಇ)	ಅನುಕಂಪದ ಆಧಾರಿತ ನೇಮಕಾತಿಗೆ ನಿರ್ಬಂಧ ಹೇರಿ ನೇರ ನೇಮಕಾತಿಗೆ ಯಾವುದೇ ನಿರ್ಬಂಧ ಹೇರದಿರಲು ಕಾರಣಗಳೇನು;	ನಷ್ಟದಲ್ಲಿರುವ ನಿಗಮ/ಮಂಡಳಿಗಳಿಗೆ ಮಾತ್ರ ಅನುಕಂಪದ ಆಧಾರಿತ ನೇಮಕಾತಿಗೆ ನಿರ್ಬಂಧವನ್ನು ವಿಧಿಸಲಾಗಿದ್ದು, ನೇರ ನೇಮಕಾತಿ ಮಾಡಿಕೊಳ್ಳಲು ಸರ್ಕಾರದಿಂದ ಅನುಮತಿ ನೀಡಲಾಗಿರುವುದಿಲ್ಲ.
ಈ)	ಯಾವ ಕಾಲಮಿತಿಯೊಳಗೆ ಈ ನಿರ್ಬಂಧವನ್ನು ತೆರವುಗೊಳಿಸಿ ಸಾವಿರಾರು ಬಡ ನೌಕರರ ಕುಟುಂಬಕ್ಕೆ ಅನುಕೂಲ ಮಾಡಿಕೊಡಲಾಗುವುದು:	ಸುತ್ತೋಲೆ ಸಂಖ್ಯೆ: ಸಿಐ 166 ಸಿಎಂಐ 2012 ದಿನಾಂಕ: 15-03-2013ರ ಸುತ್ತೋಲೆಯಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಡಿ ಬರುವ, ಲಾಭದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಾಮ್ಯದ ಕಂಪನಿಗಳು, ನಿಗಮಗಳು ಹಾಗೂ ಮಂಡಳಿಗಳು ಷರತ್ತು ಬದ್ಧವಾಗಿ ಅನುಕಂಪದ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಸದರಿ ಸುತ್ತೋಲೆಯನ್ನು ಪರಿಷ್ಕರಿಸುವ ವಿಷಯವನ್ನು ಸಾರ್ವಜನಿಕ ಉದ್ದಿಮೆಗಳ ಇಲಾಖೆಯಲ್ಲಿ ಪರಿಶೀಲಿಸಲಾಗುತ್ತಿದೆ.

ಸಂಖ್ಯೆ: ಸಿಐ 69 ಸಿಎಂಐ 2018

(ಕೆ.ಜೆ.ಜಾರ್ಜ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಕ್ಕರೆ ಹಾಗೂ
ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.